# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-940/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 30/03/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಪ್ರದೀಪ್, ಅಬಕಾರಿ ನಿರೀಕ್ಷಕರು, ಕೊಪ್ಪ ವಲಯ, ಚಿಕ್ಕಮಗಳೂರು ಹಾಗೂ ಇತರರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಕನ್ನಡಾಂಬೆ ರಾಮಮೂರ್ತಿ ಗೌಡ, ನಂ.49, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ.ಪ್ರದೀಪ್, ಅಬಕಾರಿ ನಿರೀಕ್ಷಕರು, ಕೊಪ್ಪ ವಲಯ, (2) ಶ್ರೀ.ಶಂಕರ್, ಅಬಕಾರಿ ನಿರೀಕ್ಷಕರು, ತರೀಕೆರೆ ವಲಯ, (3) ಶ್ರೀಮತಿ.ನೂರ್‌ಜಹಾನ್, ಅಬಕಾರಿ ನಿರೀಕ್ಷಕರು, ಮೂಡಿಗೆರೆ ವಲಯ, (4) ಶ್ರೀ.ಶೇಖರ್, ಅಬಕಾರಿ ನಿರೀಕ್ಷಕರು, ಚಿಕ್ಕಮಗಳೂರು ವಲಯ, (5) ಶ್ರೀ.ನೌಷದ್ ಅಹ್ಮದ್ ಖಾನ್, ಅಬಕಾರಿ ನಿರೀಕ್ಷಕರು, ಕಡೂರು ವಲಯ, ಮತ್ತು (6) ಶ್ರೀ.ತೊಳಚಾನಾಯ್ಕ್, ಅಬಕಾರಿ ನಿರೀಕ್ಷಕರು, ನರಸಿಂಹರಾಜಪುರ ವಲಯ, ಚಿಕ್ಕಮಗಳೂರು (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಅವರುಗಳ ಕಾರ್ಯವ್ಯಾಪ್ತಿಯಲ್ಲಿ ಬರುವ ಸಿ.ಎಲ್.2 ಹಾಗೂ ಸಿ.ಎಲ್.9 ಗಳಲ್ಲಿ ಭಾರಿ ಅಕ್ರಮ ನಡೆಸುತ್ತಿದ್ದು, ಸನ್ನದುದಾರರಿಗೆ ಪರೋಕ್ಷವಾಗಿ ಸಹಾಯ ಮಾಡುತ್ತಿದ್ದಾರೆ. ಸಿ.ಎಲ್.2 ಗಳಲ್ಲಿ ಚಿಲ್ಲರೆ ಮದ್ಯವನ್ನು ನೀಡಬಾರದೆಂದು ಕಾನೂನು ಇದ್ದರೂ ಸಹ ಅಬಕಾರಿ ಅಧಿಕಾರಿಗಳು ಗುಪ್ತವಾಗಿ ಚಿಲ್ಲರೆ ಮದ್ಯ ನೀಡಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಅಂಗಡಿ ಮಾಲೀಕರು ಪರಿಚಾರಕರನ್ನು ಇಟ್ಟುಕೊಂಡು ಬಿಡಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆ. ವಸತಿ ಪ್ರದೇಶದಲ್ಲಿ ಸಿ.ಎಲ್.2 ಮತ್ತು ಸಿ.ಎಲ್.9 ಸನ್ನದು ಇರುತ್ತದೆ. ಅವುಗಳು ಹರಿಜನ-ಗಿರಿಜನ ಕೇರಿಗಳಲ್ಲಿ ಕೂಡ ಅಂಗಡಿಗಳನ್ನು ನಡೆಸುತ್ತಿವೆ. ಸಿ.ಎಲ್.2 ಮತ್ತು ಸಿ.ಎಲ್.9 ಗಳಲ್ಲಿ ದರಪಟ್ಟಿಯನ್ನು ಸಹ ಹಾಕಿರುವುದಿಲ್ಲ ಮತ್ತು ಗ್ರಾಹಕರಿಗೆ ರಸೀದಿ ನೀಡಿರುವುದಿಲ್ಲ. ಎಂ.ಆರ್.ಪಿ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ. ಸಿ.ಎಲ್.2 ಲೈಸೆನ್ಸ್ ಪಡೆದು ಸಿ.ಎಲ್.9 ಬಾರ್ ಅಂಡ್ ರೆಸ್ಟೋರೆಂಟ್ ವ್ಯಾಪಾರ ಮಾಡಿ ಸರ್ಕಾರಕ್ಕೆ ನಷ್ಟವುಂಟುಮಾಡುತ್ತಿದ್ದಾರೆ. ಎದುರುದಾರರು ಅಂಗಡಿ ಮಾಲೀಕರಿಂದ ಲಂಚದ

ರೂಪದಲ್ಲಿ ಹಣ ಪಡೆದು ಕಾರ್ಯ ನಿರ್ವಹಿಸುತ್ತಿದ್ದಾರೆ. ಆದ್ದರಿಂದ, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

3) ದೂರುದಾರರ ದೂರಿನ ಮೇಲೆ 1 ರಿಂದ 6ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ತಮ್ಮ ಆಕ್ಷೇಪಣೆಯಲ್ಲಿ ಅವರ ವಲಯ ವ್ಯಾಪ್ತಿಯಲ್ಲಿ ಬರುವ ಸಿ.ಎಲ್.2, ಸಿ.ಎಲ್.9 ಮತ್ತು ಸಿ.ಎಲ್.11ಸಿ ಸನ್ನದುಗಳ 100 ಮೀಟರ್ ಅಂತರದಲ್ಲಿ ಯಾವುದೇ ಧಾರ್ಮಿಕ ಅಥವಾ ಶೈಕ್ಷಣಿಕ ವಿದ್ಯಾಸಂಸ್ಥೆಗಳಾಗಲೀ, ಆಸ್ಪತ್ರೆಗಳಾಗಲೀ, ಸರ್ಕಾರಿ ಕಚೇರಿಗಳಾಗಲೀ ಅಥವಾ ಹರಿಜನ ಮತ್ತು ಗಿರಿಜನ ಕಾಲೋನಿಗಳಾಗಲೀ ಇರುವುದಿಲ್ಲ. ಕರ್ನಾಟಕ ಅಬಕಾರಿ ಸನ್ನದುಗಳ (ಸಾಮಾನ್ಯ ಷರತ್ತುಗಳು) ನಿಯಮಾವಳಿ 1967 ರ ನಿಯಮ 5 ರ ರೀತ್ಯ ಸನ್ನದುಗಳು ಆಕ್ಷೇಪಣಾರಹಿತ ಸ್ಥಳದಲ್ಲಿರುತ್ತವೆ. ಮದ್ಯದಂಗಡಿಗಳನ್ನು ಕಾಲಕಾಲಕ್ಕೆ ಸನ್ನದು ತಪಾಸಣೆ ನಡೆಸುತ್ತಿದ್ದು, ಅಬಕಾರಿ ನಿಯಮ ಪಾಲಿಸದ ಸನ್ನದುದಾರರ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಎದುರುದಾರರು ಅವರಿಗೆ ಸಂಬಂಧಪಟ್ಟ ವಲಯದ ಕಾರ್ಯಭಾರವನ್ನು ವಹಿಸಿಕೊಂಡ ದಿನದಿಂದ ಅವರವರ ವಲಯದಲ್ಲಿ ಜಾರಿ ಮತ್ತು ತನಿಖಾ ಚಟುವಟಿಕೆಗಳನ್ನು ಬಿಗಿಗೊಳಿಸುವುದಲ್ಲದೆ ರಸ್ತೆ ಕಾವಲು ಕಾರ್ಯವನ್ನು ನಡೆಸಿ ಅಕ್ರಮ ಮದ್ಯ, ಕಳ್ಳಭಟ್ಟಿ ಸರಾಯಿ ತಯಾರು ಹಾಗೂ ಮಾರಾಟವನ್ನು ಸಂಪೂರ್ಣವಾಗಿ ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ. ಸನ್ನದಿನ ಮಾಲೀಕರಿಂದ ಲಂಚದ ಹಣವನ್ನು ಪಡೆದುಕೊಳ್ಳುತ್ತಿದ್ದಾರೆಂಬ ದೂರುದಾರರ ಆಪಾದನೆಯಲ್ಲಿ ಯಾವುದೇ ಸತ್ಯಾಂಶ ಇರುವುದಿಲ್ಲ. ಯಾವುದೋ ದುರುದ್ದೇಶದಿಂದ ದೂರನ್ನು ಸಲ್ಲಿಸಲಾಗಿರುತ್ತದೆಯೆಂದು ಹೇಳಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ಪ್ರತ್ಯುತ್ತರವನ್ನು ಸಲ್ಲಿಸುವಂತೆ ದೂರುದಾರರಿಗೆ ನೋಟೀಸು ಕಳುಹಿಸಿದರೂ ಸಹ ಅವರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

5) ದೂರುದಾರರ ದೂರನ್ನು ಪರಿಶೀಲಿಸಿದಾಗ, ಸನ್ನದುದಾರರು ನಿಯಮಗಳನ್ನು ಉಲ್ಲಂಘಿಸಿ ಚಿಲ್ಲರೆ ಮದ್ಯವನ್ನು ಮಾರಾಟ ಮಾಡಲು ಎದುರುದಾರರು ಸಹಕಾರ ನೀಡುತ್ತಿದ್ದಾರೆ ಮತ್ತು ಸನ್ನದುದಾರರಿಂದ ಹಣವನ್ನು ಪಡೆಯುತ್ತಿದ್ದಾರೆಂದು ಆಪಾದಿಸಿರುವುದಾಗಿದೆ. ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಸನ್ನದು ನಿಯಮಗಳನ್ನು ಉಲ್ಲಂಘಿಸಿ ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮವನ್ನು ಕೈಗೊಂಡಿರುವ ಬಗ್ಗೆ ಪಟ್ಟಿಯನ್ನು ಹಾಜರು ಪಡಿಸಿರುತ್ತಾರೆ. ಆದರೂ ಸಹ ಎದುರುದಾರರು ಕೈಗೊಂಡ ಕ್ರಮಗಳ ಬಗ್ಗೆ ಹಾಗೂ ಅವರ ಕಾರ್ಯನಿರ್ವಹಣೆಯ ಬಗ್ಗೆ ಪರಿಶೀಲನೆ ನಡೆಸುವುದು ಸೂಕ್ತವೆಂದು ಕಂಡುಬಂದ ಕಾರಣ, ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ, ಚಿಕ್ಕಮಗಳೂರು ಇವರಿಗೆ ಕಳುಹಿಸಿ ಆದೇಶಿಸಲಾಗಿತ್ತು.

6) ಪೊಲೀಸ್ ಉಪಾಧೀಕ್ಷಕರು, ಲೋಕಾಯುಕ್ತ, ಚಿಕ್ಕಮಗಳೂರು ಇವರು ವರದಿಯನ್ನು ಸಲ್ಲಿಸಿದ್ದು, ತಮ್ಮ ವರದಿಯಲ್ಲಿ ಚಿಕ್ಕಮಗಳೂರು ಜಿಲ್ಲೆ ಎಲ್ಲಾ ಸಿ.ಎಲ್.2 ಮದ್ಯದಂಗಡಿಗಳಲ್ಲಿ ಚಿಲ್ಲರೆ

ಮದ್ಯವನ್ನು ನಿಯಮಬಾಹಿರವಾಗಿ ಲೂಸ್ ನೀಡುತ್ತಿದ್ದ ಬಗ್ಗೆ ಅಂಗಡಿ ಮಾಲೀಕರುಗಳ ಮೇಲೆ ಪ್ರಕರಣ ದಾಖಲಿಸಿರುವುದು, ಹರಿಜನ, ಗಿರಿಜನ ಕಾಲೋನಿಗಳಲ್ಲಿ ನಿಯಮ ಬಾಹಿರವಾಗಿ ಅಂಗಡಿಗಳು ಇರುವುದಿಲ್ಲವೆಂದು ಸಿ.ಎಲ್.2, ಸಿ.ಎಲ್.9 ಗಳಲ್ಲಿ ದರಪಟ್ಟಿ ಹಾಕದೇ ಇರುವ ಬಗ್ಗೆ, ಕುಡಿಯುವ ಗ್ರಾಹಕರಿಗೆ ರಶೀದಿ ನೀಡದೇ ಇರುವ ಬಗ್ಗೆ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವ ಬಗ್ಗೆ ಪ್ರಕರಣ ದಾಖಲಿಸಿ ದಂಡ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಿರುವುದು ಮತ್ತು ಸರ್ಕಾರಕ್ಕೆ ಯಾವುದೇ ನಷ್ಟವನ್ನುಂಟು ಮಾಡದೇ ಲೈಸೆನ್ಸ್ ಹೊಂದಿದ ಮಾಲೀಕರಿಂದ ಲಂಚದ ಹಣವನ್ನು ಪಡೆಯುತ್ತಿದ್ದಾರೆಂಬ ಬಗ್ಗೆ ಯಾವುದೇ ಸತ್ಯಾಂಶ ಇರುವುದಿಲ್ಲ ಎಂಬುದು ಅಬಕಾರಿ ಉಪ ಆಯುಕ್ತರು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರ ವರದಿಯಿಂದ ತಿಳಿದುಬಂದಿರುತ್ತದೆ ಮತ್ತು ಖುದ್ದು ಗುಪ್ತವಾಗಿ ಸಿ.ಎಲ್.2 ಮತ್ತು ಸಿ.ಎಲ್.9 ಮದ್ಯದಂಗಡಿಗಳ ಬಳಿ ಹೋಗಿ ನೋಡಲಾಗಿ ಅಂಗಡಿಗಳಲ್ಲಿ ದರಪಟ್ಟಿಯನ್ನು ಹಾಕಿರುವುದಿಲ್ಲ ಮತ್ತು ಲೂಸ್ ಮದ್ಯವನ್ನು ಮಾರಾಟ ಮಾಡುವುದು ಕಂಡುಬಂದಿರುತ್ತದೆ ಎಂದು ಹೇಳಿರುತ್ತಾರೆ.

7) ತನಿಖಾಧಿಕಾರಿ ತನ್ನ ವರದಿಯ ಜೊತೆ ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, 2013–14ನೇ ಸಾಲಿನ ಜುಲೈ 2013 ರಿಂದ 2016–17ನೇ ಸಾಲಿನ ಜನವರಿ 2017 ರ ತನಕ ತರೀಕೆರೆ ಅಬಕಾರಿ ವಲಯದವರು ದಾಖಲಿಸಿಕೊಂಡಿರುವ ಪ್ರಕರಣಗಳ ಪಟ್ಟಿಯನ್ನು ಹಾಜರು ಪಡಿಸಿರುತ್ತಾರೆ. ಅದನ್ನು ಪರಿಶೀಲಿಸಿದಾಗ, ಅಬಕಾರಿ ಅಧಿಕಾರಿಗಳು 122 ಪ್ರಕರಣಗಳನ್ನು ದಾಖಲಿಸಿರುವುದು ಕಂಡುಬರುತ್ತದೆ. ಅದಲ್ಲದೆ 2012–13ನೇ ಸಾಲಿನಿಂದ 2016–17ನೇ ಸಾಲಿನಲ್ಲಿ ಚಿಲ್ಲರೆ ಮದ್ಯ ಮಾರಾಟ ಮಾಡಿದ ಬಗ್ಗೆ, ದರಪಟ್ಟಿ ಹಾಕದೆ ಇರುವ ಬಗ್ಗೆ, ರಸೀದಿ ನೀಡದಿರುವ ಬಗ್ಗೆ, ಎಂ.ಆರ್.ಪಿ.ಗಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಡೂರು ಅಬಕಾರಿ ವಲಯ, ಕೊಪ್ಪ ಅಬಕಾರಿ ವಲಯ, ಎನ್.ಆರ್.ಪುರ ವಲಯ ಇವರು ದಾಖಲಿಸಿರುವ ಪ್ರಕರಣಗಳ ಪಟ್ಟಿಯನ್ನು ಹಾಗೂ ಪ್ರ.ವ.ವರದಿಯ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ. ಅದನ್ನು ಪರಿಶೀಲಿಸಿದಾಗ, ಅಬಕಾರಿ ನಿಯಮಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡುತ್ತಿರುವ ಸನ್ನದುದಾರರ ವಿರುದ್ಧ ಅಬಕಾರಿ ಅಧಿಕಾರಿಗಳು ಕ್ರಮವನ್ನು ಕೈಗೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

8) ತನಿಖಾಧಿಕಾರಿ ತನ್ನ ವರದಿಯಲ್ಲಿ ಅವರು ಖುದ್ದು ಗುಪ್ತವಾಗಿ ಸಿ.ಎಲ್.2 ಮತ್ತು ಸಿ.ಎಲ್.9 ಮದ್ಯದಂಗಡಿಗಳ ಬಳಿ ಹೋಗಿ ನೋಡಲಾಗಿ ಅಂಗಡಿಗಳಲ್ಲಿ ದರಪಟ್ಟಿಯನ್ನು ಹಾಕಿರುವುದಿಲ್ಲ ಮತ್ತು ಲೂಸ್ ಮದ್ಯವನ್ನು ಮಾರಾಟ ಮಾಡುವುದು ಕಂಡುಬಂದಿರುತ್ತದೆಯೆಂದು ವರದಿಯಲ್ಲಿ ನಮೂದಿಸಿರುವುದು ಕಂಡುಬರುತ್ತದೆ. ಸದರಿ ಅಂಶವನ್ನು ಗಮನಿಸಿದಾಗ, ಅಬಕಾರಿ ಅಧಿಕಾರಿಗಳು ನಿಯಮ ಉಲ್ಲಂಘನೆ ಮಾಡಿದ ಸನ್ನದುದಾರರ ವಿರುದ್ಧ ಕ್ರಮ ಕೈಗೊಂಡು ಪ್ರಕರಣ ದಾಖಲಿಸಿದರೂ ಸಹ ನಂತರದಲ್ಲಿ ಅದು ಪುನರಾವರ್ತನೆಯಾಗಿರುವ ವಿಚಾರ ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ ಕಂಡುಬರುತ್ತದೆ. ಅಬಕಾರಿ ಅಧಿಕಾರಿಗಳು

ಪ್ರಕರಣವನ್ನು ದಾಖಲಿಸಿದರೂ ಸಹ ನಿಯಮವನ್ನು ಉಲ್ಲಂಘಿಸಿ ಸನ್ನದುದಾರರು ಮಾಡುವ ವ್ಯವಹಾರವನ್ನು ಸಂಪೂರ್ಣ ರೀತಿಯಲ್ಲಿ ಅಳಿಸಿಹಾಕಲು ಸಫಲವಾಗದೇ ಇರುವುದು ಕಂಡುಬರುತ್ತದೆ.

9) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಕಂಡ ಅಂಶಗಳ ಬಗ್ಗೆ ಹಾಗೂ ನಿಯಮಗಳನ್ನು ಉಲ್ಲಂಘಿಸಿ ದರಪಟ್ಟಿಯನ್ನು ಹಾಕಿದೆ ಮತ್ತು ಲೂಸ್ ಮದ್ಯವನ್ನು ಮಾರಾಟ ಮಾಡುತ್ತಿರುವ ಅಂಗಡಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 30/3/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.